ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

# ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ

## ಪುಲಕೇಶಿ ರಸ್ತೆ, ತಿಲಕ್‌ನಗರ, ಮೈಸೂರು

(ಭಾರತೀಯ ಪುನರ್ವಸತಿ ಮಂಡಳಿಯಿಂದ ಮಾನ್ಯತೆ ಪಡೆದಿದೆ)

e-mail:hkhelenkeller91@gmail.com Ph.No:0821-2491600

**2019-20ನೇ ಸಾಲಿನ ಪ್ರವೇಶಾತಿ ಪ್ರಕಟಣೆ**

ವಿಶೇಷ ಶಿಕ್ಷಣದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿಯ ಧ್ಯೇಯದೊಂದಿಗೆ 2000-01ರಿಂದ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರಗಳು ಪ್ರಾರಂಭವಾದವು. ಇವುಗಳು ರಾಜ್ಯ ಸರ್ಕಾರದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವತಿಯಿಂದ ವಿಕಲಚೇತನರ ಕ್ಷೇತ್ರದಲ್ಲಿ ನಡೆಸುತ್ತಿರುವ ಏಕೈಕ ತರಬೇತಿ ಸಂಸ್ಥೆಯಾಗಿವೆ. ತರಬೇತಿ ಕೇಂದ್ರದಲ್ಲಿ 2 ತರಬೇತಿ ಕಾರ್ಯಕ್ರಮಗಳು ಲಭ್ಯವಿದ್ದು, ಅಂಧ ಮಕ್ಕಳಿಗೆ ಶಿಕ್ಷಕರಾಗಲು D.Ed.Spl.Edu.(VI) ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ ಶಿಕ್ಷಕರಾಗಲು D.Ed.Spl.Ed.(HI) ತರಬೇತಿಗಳನ್ನು **ಭಾರತೀಯ ಪುನರ್ವಸತಿ ಮಂಡಳಿ (RCI)** ನವದೆಹಲಿಯವರ ಮಾನ್ಯತೆಯೊಂದಿಗೆ ನಡೆಸಲಾಗುತ್ತಿದೆ.

ತರಬೇತಿ ಕೇಂದ್ರವು ನುರಿತ ಬೋಧನಾ ವರ್ಗವನ್ನು ಹೊಂದಿರುವುದರ ಜೊತೆಗೆ, ಸುಸಜ್ಜಿತ ಗ್ರಂಥಾಲಯ, ಪ್ರಯೋಗಾಲಯ ಹಾಗೂ ಸ್ಮಾರ್ಟ್ ಕ್ಲಾಸ್ ಮತ್ತು ಕಂಪ್ಯೂಟರ್ ಲ್ಯಾಬ್‌ಗಳಂತಹ ಸೌಲಭ್ಯವನ್ನು ಹೊಂದಿದೆ. ಪ್ರಶಿಕ್ಷಣಾರ್ಥಿಗಳಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ನಡೆಯುತ್ತಿರುವ ವಸತಿ ನಿಲಯಗಳಲ್ಲಿ ವಸತಿ ಲಭ್ಯವಿರುತ್ತದೆ.

**1. ಉದ್ಯೋಗಾವಕಾಶಗಳು:**

ತರಬೇತಿ ಕೇಂದ್ರದಲ್ಲಿ ವಿಶೇಷ ಡಿ.ಇಡಿ.ಯನ್ನು ಪೂರೈಸಿದ ಅಭ್ಯರ್ಥಿಗಳು–

1. ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರಾಗಿ ಸೇವೆ ಸಲ್ಲಿಸಬಹುದು.
2. ಶಿಕ್ಷಣ ಇಲಾಖೆಯು ನಡೆಸುವ TET ಪರೀಕ್ಷೆ ಮತ್ತು **ಶಿಕ್ಷಕರ ನೇಮಕಾತಿ ಪರೀಕ್ಷೆಗಳಿಗೆ ಅರ್ಹರಾಗಿರುತ್ತಾರೆ** ಹಾಗೂ **ನೇಮಕಗೊಂಡಿರುತ್ತಾರೆ.**
3. ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ವಿಶೇಷ ತಜ್ಞರಾಗಿ ಕಾರ್ಯನಿರ್ವಹಿಸಬಹುದು.
4. ಸರ್ವ ಶಿಕ್ಷಣ ಅಭಿಯಾನದಲ್ಲಿ ಸಂಪನ್ಮೂಲ ಶಿಕ್ಷಕರಾಗಿ ಕಾರ್ಯನಿರ್ವಹಿಸಬಹುದು.
5. ಸಾಮಾನ್ಯ ಶಾಲೆಗಳಲ್ಲಿ ವಿಶೇಷ ಶಿಕ್ಷಕರಾಗಿ ಕಾರ್ಯನಿರ್ವಹಿಸಬಹುದು.
6. ಗೃಹ ಆಧಾರಿತ ಶಿಕ್ಷಕರಾಗಿ ಕಾರ್ಯನಿರ್ವಹಿಸಬಹುದು.

**ತರಬೇತಿಗಳು :**

**ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮ (ದೃಷ್ಟಿದೋಷವುಳ್ಳ ಮಕ್ಕಳಿಗೆ ಶಿಕ್ಷಕರಾಗಲು)**

| | | |
|---|---|---|
| **ತರಬೇತಿಯ ಹೆಸರು** | : | **D.Ed.Spl.Edu.(VI): D.Ed Special Education–Visual Impairment** |
| **ಅವಧಿ** | : | 2 ವರ್ಷಗಳು ( 4 ಸೆಮಿಸ್ಟರ್‌ಗಳು) |
| **ಅರ್ಹತೆ** | : | • PUCಯಲ್ಲಿ ಶೇ.50 ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. (ಎಸ್.ಸಿ, ಎಸ್.ಟಿ ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ ಶೇ.45%)<br>• ದೃಷ್ಠಿದೋಷವುಳ್ಳವರು, ದೈಹಿಕ ನ್ಯೂನತೆವುಳ್ಳವರು ಮತ್ತು ಸಾಮಾನ್ಯ ಅಭ್ಯರ್ಥಿಗಳಿಗೆ ಪ್ರವೇಶವಿರುತ್ತದೆ<br>• ಈ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳು ಸಹ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. |
| **ಗರಿಷ್ಠ ದಾಖಲಾತಿ** | : | 25 |
| **ಬೋಧನಾ ಮಾಧ್ಯಮ** | : | ಕನ್ನಡ |
| **ನಿಗದಿತ ಶುಲ್ಕ** | : | ಪ್ರತಿ ಶೈಕ್ಷಣಿಕ ವರ್ಷಕ್ಕೆ ರೂ. 11,025/– ಬೋಧನಾ ಶುಲ್ಕ (ಎಸ್.ಸಿ/ಎಸ್.ಟಿ/ಅಂಧ/ಅಲ್ಪದೃಷ್ಠಿ/ದೈಹಿಕ ವಿಕಲಚೇತನರಿಗೆ ಸರ್ಕಾರದಿಂದ ಶುಲ್ಕ ಮರುಪಾವತಿ ಸೌಲಭ್ಯ ಇರುತ್ತದೆ)<br>ಭದ್ರತಾ ಠೇವಣಿ ರೂ. 2000/–<br>(ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ನಂತರ ಭದ್ರತಾ ಠೇವಣಿಯನ್ನು ಮರುಪಾವತಿಸಲಾಗುತ್ತದೆ.) |

**ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮ (ಶ್ರವಣದೋಷವುಳ್ಳ ಮಕ್ಕಳಿಗೆ ಶಿಕ್ಷಕರಾಗಲು)**

| | | |
|---|---|---|
| **ತರಬೇತಿಯ ಹೆಸರು** | : | **D.Ed.Spl.Ed.(HI) : D.Ed Special Education- Hearing Impairment** |
| **ಅವಧಿ** | : | 2 ವರ್ಷಗಳು ( 4 ಸೆಮಿಸ್ಟರ್‌ಗಳು) |
| **ಅರ್ಹತೆ** | : | • PUCಯಲ್ಲಿ ಶೇ.50 ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. (ಎಸ್.ಸಿ, ಎಸ್.ಟಿ ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ ಶೇ.45%)<br>• ದೈಹಿಕ ನ್ಯೂನತೆವುಳ್ಳವರು ಮತ್ತು ಸಾಮಾನ್ಯ ಅಭ್ಯರ್ಥಿಗಳಿಗೆ ಪ್ರವೇಶವಿರುತ್ತದೆ.<br>• ಈ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳು ಸಹ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. |
| **ಗರಿಷ್ಠ ದಾಖಲಾತಿ** | : | 25 |
| **ಬೋಧನಾ ಮಾಧ್ಯಮ** | : | ಕನ್ನಡ |
| **ನಿಗದಿತ ಶುಲ್ಕ** | : | ಯಾವುದೇ ಬೋಧನಾ ಶುಲ್ಕ ಇರುವುದಿಲ್ಲ (ಉಚಿತ)<br>ಭದ್ರತಾ ಠೇವಣಿ ರೂ. 2,000/–<br>(ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ನಂತರ ಭದ್ರತಾ ಠೇವಣಿಯನ್ನು ಮರುಪಾವತಿಸಲಾಗುತ್ತದೆ.) |

**ಅರ್ಜಿಗಳ ಲಭ್ಯತೆ:**

ತರಬೇತಿಗೆ online ಮೂಲಕ ಅರ್ಜಿಯನ್ನು ಸಲ್ಲಿಸ ಬೇಕಾಗಿರುತ್ತದೆ. ಬೇರಾವುದೆ ಮಾದ್ಯಮದ ಮೂಲಕ ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ. ಅರ್ಜಿಗಳು **RCI**ನ ಅಂತರ್ಜಾಲದಲ್ಲಿ https://applyadmission.net/aioat2019/ ಲಭ್ಯವಿರುತ್ತದೆ.

**2. online ನಲ್ಲಿ ಅರ್ಜಿ ಸಲ್ಲಿಸಲು ಅಗತ್ಯವಾದ ದಾಖಲೆಗಳು:**

1. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
2. ಪಿ.ಯು.ಸಿ ಅಂಕಪಟ್ಟಿ
3. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ
4. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ
5. ವಿಕಲಚೇತನರ ವ್ಯಕ್ತಿಯಾಗಿದಲ್ಲಿ ಗುರುತಿನ ಪತ್ರ
6. Credit card/ Debit card 500/– ಸಾಮಾನ್ಯ ವರ್ಗದವರಿಗೆ (400/- ಪರಿಶಿಷ್ಟ ಜಾತಿ/ಪಂಡಗ ಹಾಗೂ ವಿಕಲಚೇತನರಿಗೆ) ಅರ್ಜಿ ಶುಲ್ಕವನ್ನು ಭರಿಸಲು

**–: ವಿಶೇಷ ಸೂಚನೆ :–**

a. ಅಭ್ಯರ್ಥಿಗಳು ತಮ್ಮ ಇತ್ತಿಚಿನ ಭಾವಚಿತ್ರವನ್ನು ಕನಿಷ್ಠ 20KB ಹಾಗೂ ಗರಿಷ್ಠ 100KB ಮೀರದಂತೆ jpg/jpeg format ನಲ್ಲಿ scan ಮಾಡಿ ಇಟ್ಟುಕೊಂಡಿರಬೇಕು.
b. ಅಭ್ಯರ್ಥಿಗಳು ತಮ್ಮ ಸಹಿಯನ್ನು ಕನಿಷ್ಠ 10KB ಹಾಗೂ ಗರಿಷ್ಠ 30KB ಮೀರದಂತೆ jpg/jpeg format ನಲ್ಲಿ scan ಮಾಡಿ ಇಟ್ಟುಕೊಂಡಿರಬೇಕು.
c. ಒಂದು ಇ–ಮೇಲ್ ID ಮೂಲಕ ಒಂದು ಅರ್ಜಿಯನ್ನು ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
d. Credit card/ Debit card ಗೆ link ಅಗಿರುವ ಮೊಬೈಲ್ ಸಂಖ್ಯೆಗೆ OTP ಬರುವುದರಿಂದ ಫೋನ್ ಅನ್ನು ಅರ್ಜಿ ಸಲ್ಲಿಸುವ ವೇಳೆ ನಿಮ್ಮ ಬಳಿಯಲ್ಲೆ ಇಟ್ಟುಕೊಂಡಿರತಕ್ಕದು.

**3. ಪ್ರವೇಶಾತಿಯ ವಿಧಾನ:**

ಪ್ರವೇಶಾತಿಯು ಸಂಪೂರ್ಣವಾಗಿ online ಮೂಲಕ ನಡೆಯುತ್ತದೆ. ಭಾರತೀಯ ಪುನರ್ವಸತಿ ಮಂಡಳಿ ***(RCI)*** ರವರು ನಡೆಸುವ online ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳನ್ನು ಚಾಲ್ತಿಯಲ್ಲಿರುವ ***RCI*** ನಿಯಾಮಾನುಸಾರ ದಾಖಲು ಮಾಡಿಕೊಳ್ಳಲಾಗುವುದು.

***ಸೂಚನೆ: ಪ್ರವೇಶಾತಿ ನಿಯಮಗಳು ಕಾಲಕಾಲಕ್ಕೆ ಬದಲಾವಣೆಗಳನ್ನು ಹೊಂದುತ್ತಿರುತ್ತವೆ. ಬದಲಾವಣೆಗೊಂಡ ಮಾಹಿತಿಗಾಗಿ https://applyadmission.net/aioat2019/ ನಲ್ಲಿ ವೀಕ್ಷಿಸುವುದು.***

***ಪ್ರವೇಶಾತಿಗೆ ದಾಖಲಾತಿ ಪ್ರಾಧಿಕಾರವಾದ ಭಾರತೀಯ ಪುನರ್ವಸತಿ ಮಂಡಳಿ (RCI) ನಿರ್ಧಾರವೇ ಅಂತಿಮವಾಗಿರುತ್ತದೆ.***

**ಮುಖ್ಯವಾದ ದಿನಾಂಕಗಳು**

| ಕ್ರಮ ಸಂಖ್ಯೆ | ಪ್ರಕ್ರಿಯೆಯ ಹಂತಗಳು | ದಿನಾಂಕ |
|---|---|---|
| 1 | online ನಲ್ಲಿ ಅರ್ಜಿ ಲಭ್ಯತೆ ಮತ್ತು ನೋಂದಣಿ ಪ್ರಾರಂಭ | 01–02–2019 ರಿಂದ |
| 2 | online ನಲ್ಲಿ ಅರ್ಜಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ | 15–04–2019 |
| 3 | online ನಲ್ಲಿ ಪರೀಕ್ಷೆ ನಡೆಯುವ ದಿನಾಂಕ | 08-05-2019 |
| 4 | online ಪರೀಕ್ಷೆಗಳ ಫಲಿತಾಂಶ ಪ್ರಕಟಣೆ | 13–05–2019 |
| 5 | ಮೊದಲ ಸುತ್ತಿನ ಪ್ರವೇಶಾತಿ ಪ್ರಕಟಣೆ ಪಟ್ಟಿಯ ಕೊನೆಯ ದಿನಾಂಕ | 17–05–2019 ರಿಂದ 24–05–2019 |
| 6 | ದ್ವಿತೀಯ ಸುತ್ತಿನ ಪ್ರವೇಶಾತಿ ಪ್ರಕಟಣೆ ಪಟ್ಟಿಯ ಕೊನೆಯ ದಿನಾಂಕ | 27–05–2019 ರಿಂದ 03–06–2019 |
| 7 | ಕೊನೆಯ ಸುತ್ತಿನ ಪ್ರವೇಶಾತಿ ಪ್ರಕಟಣೆ ಪಟ್ಟಿಯ ಕೊನೆಯ ದಿನಾಂಕ | 05–06–201 ರಿಂದ 12–06–2019 |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಉಪನಿರ್ದೇಶಕರು (ತರಬೇತಿ)
ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ.
ಪುಲಕೇಶಿ ರಸ್ತೆ,ತಿಲಕ್‌ನಗರ, ಮೈಸೂರು–570001

**ದೂ.ಸಂ: 0821-2491600**

ಆಶಾ.ವಿ.ಹೀರೆಮಠ್–9113561620, ಟಿ.ಡಿ.ಮಂಜುನಾಥ–9686762378, ಮುರಳಿ.ಹೆಚ್.ಹೆಚ್.–7829115275, ಮಹದೇವನಾಯಕ.ಕೆ–9611773697, ಉಮೇಶ.ಡಿ–9743503262, ಅನ್ನಪೂರ್ಣ.ಎಂ.ಎನ್–7411965971, ಪ್ರಿಯಾಂಕ.ವಿ– 9886801509

e-mail : hkhelenkeller91@gmail.com, gttchh.mys@gmail.com

ದಿನಾಂಕ: 15-03-2019

ಉಪನಿರ್ದೇಶಕರು (ತರಬೇತಿ)
ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ
ಶಿಕ್ಷಕರ ತರಬೇತಿ ಕೇಂದ್ರ, ಮೈಸೂರು